**ಓ:ಎಸ್:ನಂ.250/2015**

**ಡಿ ಡಬ್ಲ್ಯೂ- 2**

**<u>ದಿಃ 10-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದ</u>**

ಭದ್ರಮ್ಮನ 5 ಜನ ಮಕ್ಕಳು ಈಗ ಬೇರೆ ಬೇರೆ ಊರುಗಳಲ್ಲಿ ವಾಸವಾಗಿದ್ದಾರೆ. ಭದ್ರಮ್ಮನ ಒಬ್ಬ ಮಗಳಾದ ಪುಟ್ಟಮ್ಮನವರನ್ನು ಉಂಬಳೆ ಬೈಲು ಜಂಕ್ಷನ್ ನಲ್ಲಿರುವ ಗ್ರಾಮದಲ್ಲಿರುವ ವ್ಯಕ್ತಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಪುಟ್ಟಮ್ಮನ ಗಂಡನ ಹೆಸರು ನಿಂಗಪ್ಪ. ಪುಟ್ಟಮ್ಮ ಮತ್ತು ನಿಂಗಪ್ಪ ಉಂಬೈಬೈಲು ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಪುಟ್ಟಮ್ಮ ಯಾವ ವರ್ಷದಂದು ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಸಹ ಭದ್ರಮ್ಮನ ಮಗಳಾಗಿದ್ದು, ನನ್ನನ್ನು ಶಿವಮೊಗ್ಗ ತಾಲ್ಲೂಕಿನ ಹುಲ್ಲೇಹಳ್ಳಿ ಗ್ರಾಮದ ವಾಸಿಯಾದ ವೇಲಾಯುಧನ್ ರವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ನಾನು ನನ್ನ ತವರು ಮನೆಗೆ ಆಗಾಗ ಹೋಗಿ ಬರುತ್ತೇನೆಂದರೆ ಸರಿ. ಭದ್ರಮ್ಮನ ಹೆಸರಿನಲ್ಲಿ ಒಂದು ಮನೆ ಮತ್ತು ಹಿತ್ತಲಿನ ಜಾಗ ಇತ್ತು. ಭದ್ರಮ್ಮನಿಗೆ ಇಬ್ಬರು ಗಂಡು ಮಕ್ಕಳು ಅವರು ಸಿದ್ದಪ್ಪ ಮತ್ತು ಗಂಗಪ್ಪ. ಸದರಿಯವರು ಭದ್ರಮ್ಮನ ಜಮೀನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಭದ್ರಮ್ಮನವರಿಗೆ ಯಾವ ಯಾವ ಆಸ್ತಿ ಮಂಜೂರಾಗಿದೆ ಎಂದು ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಭದ್ರಮ್ಮನ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

ಭದ್ರಮ್ಮನಿಗೆ ಸೇರಿದ ಆಸ್ತಿಯನ್ನು ಸರ್ಕಾರದವರು ಯಾವ ವರ್ಷ ವಶಕ್ಕೆ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ ಅವರ ತಂದೆ ತಾಯಿಗಳ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ತಾಯಿಯ ಮರಣ ನಂತರ ನಮ್ಮ ತಾಯಿ ಮನೆಗೆ ಹೋಗಿ ಬರುತ್ತಿರುತ್ತೇನೆ. ಪುಟ್ಟಮ್ಮ ಸತ್ತಾಗ ವಾದಿ ಮತ್ತು ಪ್ರತಿವಾದಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಈಗ ಹೇಳಲು ಬರುವುದಿಲ್ಲ. ಪ್ರತಿವಾದಿಯು ಮಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ನಮ್ಮ ಊರಿನಲ್ಲಿ ವಾಸ ವಾಗಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. 1ನೇ ವಾದಿಯು ಪ್ರಾಪ್ತ ವಯಸ್ಕನಾದ ನಂತರ ಎಂ ಸಿ ಹಳ್ಳಿಗೆ ಬಂದು ವಾಸವಾಗಿದ್ದರು ಎಂದರೆ ಸರಿ. ಸರ್ಕಾರದಿಂದ 1ನೇ ವಾದಿಗೆ ಜಮೀನು ಮಂಜೂರಾಗಿದೆ ಎಂದರೆ ಸರಿಯಲ್ಲ. 1ನೇ ವಾದಿಗೆ ಸರ್ಕಾರದಿಂದ ಮಂಜೂರಾದ ನಂತರ ಆತನ ಹೆಸರಿಗೆ ಖಾತೆ ವರ್ಗಾವಣೆ

ಆಗಿ ಆತನೇ ಸ್ವಾಧೀನಾನುಭವದಲ್ಲಿದ್ದಾನೆಂದರೆ ಸರಿಯಲ್ಲ. *1*ನೇ ವಾದಿಯು ಹೆಬ್ಬೆ ಗ್ರಾಮದಲ್ಲಿ ವಾಸಿಸುವಾಗಲೇ ಆತನನಿಗೆ ವಿವಾಹವಾಗಿತ್ತು. *1*ನೇ ವಾದಿ ಮತ್ತು ಆತನ ಹೆಂಡತಿ ಎಂ ಸಿ ಹಳ್ಳಿಯಲ್ಲಿ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ಅಲ್ಲೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಸರ್ಕಾರದವರು ಕಟ್ಟಿಸಿಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. *1*ನೇ ವಾದಿಯು ತನಗೆ ಮಂಜೂರಾದ ಜಮೀನಿನಲ್ಲಿ ಅಡಿಕೆ ತೋಟವನ್ನು ಮಾಡಿ ಸದರಿ ಜಮೀನಿನಲ್ಲಿ ಸ್ವಾದೀನದಲ್ಲಿದ್ದಾನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಭದ್ರಮ್ಮನವರ ಹೆಸರಿನಲಿಲರುವ ಜಮೀನು ಸರ್ಕಾರದವರು ವಶಪಡಿಸಿಕೊಂಡಿರುತ್ತಾರೆ ಮತ್ತು ಅವರಿಗೆ ಸರ್ಕಾರದಿಂದ *60* ಸಾವಿರ ಮಂಜೂರಾಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯ ತಂದೆ ತಾಯಿಗಳು ಮರಣ ಹೊಂದಿದ ನಂತರ ನಾನೇ ಅವರನ್ನು ಸಾಕಿ ಸಲುಹಿದ್ದೇನೆಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಎಂ ಸಿ ಹಳ್ಳಿಯಲ್ಲಿ *1*ನೇ ವಾದಿಗೆ ಮಂಜೂರಾದ ಸ್ವತ್ತುಗಳು *1*ನೇ ವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಪ್ರತಿವಾದಿ ಯಾವತ್ತೂ ಸ್ವಾಧೀನದಲ್ಲಿ ಇಲ್ಲಎಂದರೆ ಸರಿಯಲ್ಲ. ಎಂ ಸಿ ಹಳ್ಳಿಯಲ್ಲ *1*ನೇ ವಾದಿಗೆ ಸರ್ಕಾರದಿಂದ ಒಂದು ಮನೆ ಮಂಜೂರಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***